**<u>ಮುಖ್ಯ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಯಾದಗಿರಿ</u>**

**<u>ಸಿ.ಸಿ. ನಂ. 744 / 2021</u>**

ಸಿಡಬ್ಲ್ಯೂ- **01**
ಪಿಡಬ್ಲ್ಯೂ-**01**

<u>ದಿನಾಂಕಃ **26.12.2024.**</u>

<u>ಸಾಕ್ಷಿಗೆ ಸತ್ಯ ಪ್ರತಿಜ್ಞೆ ಬೋಧಿಸಲಾಯಿತು</u>

ಸಾಕ್ಷಿಯ ಹೆಸರುಃ - ರವಿಂದ್ರಕುಮಾರ
ತಂದೆಯ/ಗಂಡನ ಹೆಸರುಃ - ಶರಣಯ್ಯ
ವಯಸ್ಸುಃ -? **38** ವರ್ಷ
ಉದ್ಯೋಗಃ - ಆರಾಧನ ಪಬ್ಲಿಕ್ ಶಾಲೆ, ಗುರುಮಠಕಲ್,
ವಾಸಸ್ಥಳಃ - ಗುರುಮಠಕಲ್.

<u>ಮುಖ್ಯ ವಿಚಾರಣೆಃ ಸ.ಸ.ಅ. ರವರಿಂದಃ</u>

2010 ರಿಂದ ಇಲ್ಲಿಯವರೆಗೆ ಆರಾಧನ ಪಬ್ಲಿಕ್ ಶಾಲೆ, ಗುರುಮಠಕಲ್‌ದಲ್ಲಿ ನಾನು ಕಾರ್ಯದರ್ಶಿಯಾಗಿ ಕಾರ್ಯನಿರ್ವಹಿಸುತ್ತಿದ್ದೇನೆ. ಸದರಿ ಶಾಲೆಯಲ್ಲಿ 1 ರಿಂದ 10 ನೇ ತರಗತಿಯವರೆಗೆ ವಿದ್ಯಾರ್ಥಿಗಳು ಶಾಲೆಯನ್ನು ಕಲಿಯುತ್ತಿದ್ದಾರೆ. ಶಿಕ್ಷಣ ಇಲಾಖೆಯವರು ನಮ್ಮ ಶಾಲೆಗೆ ಎಸ್ ಎ ಟಿ ಎಸ್ ತಂತ್ರಾಂಶವನ್ನು ನೀಡಿರುತ್ತಾರೆ. ಆದ್ದರಿಂದ ನಾವು ಸದರಿ ತಂತ್ರಾಂಶದಲ್ಲಿ ಮಕ್ಕಳ ದಾಖಲಾತಿಗಳನ್ನು ನಮೂದಿಸುತ್ತೇವೆ ಮತ್ತು ಅದಕ್ಕೆ ಪ್ರತ್ಯೇಕವಾಗಿ ಉಪಯೋಗದಾರರ ನಂಬರ ಮತ್ತು ಪಾಸ್ ಪಾರ್ಡ್ ನ್ನು ನೀಡಿರುತ್ತಾರೆ. 2019 ಮಾರ್ಚ್ ತಿಂಗಳು 19 ರಂದು ನಮ್ಮ ಶಾಲೆಯ ವಿದ್ಯಾರ್ಥಿಗಳಾದ ಅಚ್ಚುತ್ ಹರಿ ತಂದೆ ಹಣಮಂತು, ಶ್ರೇಯಾ ತಂದೆ ಮಲ್ಲಿಕಾರ್ಜುನ ಹಾಗೂ ಭಾನುತೇಜ್ ತಂದೆ ವಿಶ್ವನಾಥ ಮಂಚಾಳೇ ಈ ವಿದ್ಯಾರ್ಥಿಗಳ ವರ್ಗಾವಣೆ ಪ್ರಮಾಣ ಪತ್ರಗಳಲ್ಲಿ ಇರುವ ನಡುವಳಿಕೆ ಕಂಡಿಂಕೆಯಲ್ಲಿ Not satisfactory ಎಂದು ನಮೂದಿಸಿರುತ್ತಾರೆ. ಯಾರೋ ವ್ಯಕ್ತಿಗಳು ನಮ್ಮ ಶಾಲೆಯ ಯುಸರ್ ನೇಮ್ ಮತ್ತು ಪಾಸ್ ಪಾರ್ಡ್ ಗಳನ್ನು ಉಪಯೋಗಿಸಿಕೊಂಡು ವಿದ್ಯಾರ್ಥಿಗಳ ವರ್ಗಾವಣೆ ಪ್ರಮಾಣ ಪತ್ರಗಳಲ್ಲಿ ಇರುವ ನಡುವಳಿಕೆ ಕಂಡಿಂಕೆಯಲ್ಲಿ Not satisfactory ಎಂದು ನಮೂದಿಸಿರುತ್ತಾರೆ. ಅವುಗಳನ್ನು ವಾಟ್ಸಪ್ ಮೂಲಕ ಶಾಲೆಯ ವಿದ್ಯಾರ್ಥಿಗಳ ಪಾಲಕರಿಗೆ ಕಳುಹಿಸಿಕೊಟ್ಟಿರುತ್ತಾರೆ. ನಂತರ ಸದರಿ ವಿದ್ಯಾರ್ಥಿಗಳ

ಪೋಷಕರು ನಮ್ಮ ಶಾಲೆಗೆ ಬಂದು ತಕರಾರು ಮಾಡಿರುತ್ತಾರೆ. ಸದರಿ ಕೆಲಸದಿಂದ ನಮ್ಮ ಶಾಲೆಗೆ ಕೆಟ್ಟ ಹೆಸರು ಬಂದಿರುತ್ತದೆ. ಸದರಿ ವಿಷಯವನ್ನು ಕ್ಷೇತ್ರ ಶಿಕ್ಷಣಾಧಿಕಾರಿಯ ಕಚೇರಿಯಲ್ಲಿ ಇರುವ ಇ.ಸಿ.ಓ ಮತ್ತು ಸಿ.ಆರ್.ಸಿ ಮತ್ತು ಡಿ.ಡಿ.ಪಿ.ಐ ರವರ ಗಮನಕ್ಕೆ ತಂದಿರುತ್ತೇವೆ. ಅವರು ನಮ್ಮ ಶಾಲೆಯ ಯುಸರ್ ನೇಮ್ ಮತ್ತು ಪಾಸ್ ವಾರ್ಡ್ ನ್ನು ಬದಲಾಯಿಸಿಕೊಳ್ಳಿ ಎಂದು ನಮ್ಮಗೆ ಹೇಳಿದರು. ಆ ಪ್ರಕಾರ ನಮ್ಮ ಶಾಲೆಯವರು ಯುಸರ್ ನೇಮ್ ಮತ್ತು ಪಾಸ್ ವಾರ್ಡ್ ನ್ನು ಬದಲಾವಣೆ ಮಾಡಿರುತ್ತಾರೆ.

ದಿನಾಂಕಃ 27.05.2019 ರಂದು ಸಾಯಂಕಾಲ 5-30 ಗುಂಟೆಗೆ ಬೇರೆ ಮಕ್ಕಳ ವಿವರಣೆಗಳನ್ನು ತಿದ್ದುಪಡೆ ಮಾಡಿ ಅವರ ಪೋಷಕರಿಗೆ ಕಳುಹಿಸಿಕೊಟ್ಟಿದ್ದರು. ಸದರಿ ದಾಖಲೆಯ ಪ್ರತಿಗಳನ್ನು ಸಿ.ಆರ್.ಸಿ ರವರಿಗೆ ವಾಟ್ಸಪ್ ಮೂಲಕ ಕಳುಹಿಸಿಕೊಟ್ಟಿದ್ದರು. ನಂತರ ನಾನು ಪೋಷಕರಿಗೆ ವಿಚಾರಿಸಿದ್ದಾಗ ಸದರಿ ಸಂದೇಶವು ಯಾವ ಮೊಬೈಲ್‌ನ ಮೂಲಕ ಬಂದಿರುತ್ತದೆ ಎಂದು ಕೇಳಿದ್ದಾಗ ಅವರು ವಿಶ್ವನಾಥ ಮಂಚಾಳೇ ರವರ ಮೊಬೈಲ್ ಮೂಲಕ ಬಂದಿರುತ್ತದೆ ಎಂದು ಹೇಳಿದ್ದರು. ಆದ್ದರಿಂದ ನಾನು ಯಾದಗಿರಿಯ ಸೈಬರ್ ಪೊಲೀಸ್ ಠಾಣೆಗೆ ದೂರನ್ನು ನೀಡಿರುತ್ತೇನೆ. ಸಾಕ್ಷಿಯು ತಾನು ನೀಡಿದ ದೂರನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ 1 ಎಂದು ಗುರುತಿಸಲಾಯಿತು. ಅದರ ಮೇಲೆ ಇರುವ ಸಾಕ್ಷಿಯ ಸಹಿಯನ್ನು ನಿಪಿ 1(ಎ) ಎಂದು ಗುರುತಿಸಲಾಯಿತು. ಆರೋಪಿತನನ್ನು ಕರೆದು ತಪಾಸಣೆ ಮಾಡಿರುತ್ತಾರೆ. ನಾನು ಯಾವುದೇ ಪುರವಣಿ ಹೇಳಿಕೆಯನ್ನು ನೀಡಿರುವುದಿಲ್ಲ.

(ಈ ಹಂತದಲ್ಲಿ ಸಾಕ್ಷಿಯು ಭಾಗಶಃ ಪ್ರತಿಕೂಲಕರ ಸಾಕ್ಷ್ಯವನ್ನು ನುಡಿದ ಕಾರಣ ಸ.ಸ.ಅಭಿಯೋಜಕರವರು ಪಾಟೀ ಸವಾಲು ಮಾಡಲು ಅನುಮತಿ ಕೋರಿರುತ್ತಾರೆ. )

<u>ಪಾಟೀ ಸವಾಲುಃ ಸ.ಸ.ಅ ರವರಿಂದಃ</u>

ದಿನಾಂಕಃ 18.07.2021 ರಂದು ನಾನು ಪೊಲೀಸರ ಮುಂದೆ ಪುರವಣಿ ಹೇಳಿಕೆಯನ್ನು ನೀಡಿರುತ್ತೇನೆ ಎಂದರೆ ಸರಿ. ಸದರಿ ಶಾಲೆಯ ತಂತ್ರಾಂಶ ಲಾಗಿನ್ ಐಡಿ Aradhana1 ಮತ್ತು ಡೈಸ್ ಕೋಡ್ 29331014128 ಇತ್ತು ಎಂದರೆ ಸರಿ. ಆರೋಪಿತರು ತಮ್ಮ ಮೊಬೈಲ್ ಮತ್ತು 1 ನೇ ಆರೋಪಿತನು ತನ್ನ ಕಂಪ್ಯೂಟರ್ ಸಿಸ್ಟಮ್ ನಲ್ಲಿ ಅನಧಿಕೃತವಾಗಿ ಶಾಲೆಯ ತಂತ್ರಾಂಶ ಲಾಗಿನ್ ಐಡಿ Aradhana1 ಮತ್ತು ಡೈಸ್ ಕೋಡ್ 29331014128 ಅವುಗಳನ್ನು ಬಳಸಿ ವಿದ್ಯಾರ್ಥಿಗಳ ವರ್ಗಾವಣೆ ಪ್ರಮಾಣ ಪತ್ರಗಳಲ್ಲಿ ತಿದ್ದುಪಡಿ ಮಾಡಿ ವಾಟ್ಸಪ್ ನಲ್ಲಿ ದಿನಾಂಕಃ 11.03.2019 ರಿಂದ

30.05.2019 ರ ವರೆಗೆ ವಾಟ್ಸಪ್ ಮುಖಾಂತರ ಪೋಷಕರಿಗೆ ಕಳುಹಿಸಿಕೊಟ್ಟಿರುವ ಬಗ್ಗೆ ಪೋಷಕರಿಂದ ನನಗೆ ತಿಳಿದಿರುತ್ತದೆ ಎಂದರೆ ಸರಿ. ಅದೇ ದಿನ ಲಾಗಿನ ಐಡಿ ಮತ್ತು ಪಾಸ್ ವಾರ್ಡ್ ನ ಮಾಹಿತಿ, ದಿನಾಂಕಃ 11.03.2019 ರಂದು ವರ್ಗಾವಣೆ ಪ್ರಮಾಣ ಪತ್ರ ಕಳುಹಿಸಿದ ಬಗ್ಗೆ ಹಾಗೂ ವಿದ್ಯಾರ್ಥಿಗಳ ವಿವರ, 2 ನೇ ಆರೋಪಿಯನ್ನು ಗುಮಾಸ್ತನ್ನಾಗಿ ತೆಗೆದುಕೊಂಡ ಬಗ್ಗೆ ಆತನು ನೀಡಿದ ಕೋರಿಕೆ ಪತ್ರ ಮತ್ತು ಭಾನುತೇಜ ರವರ ಟಿಸಿ. ನಕಲು ಪ್ರತಿ ಮತ್ತು 1 ನೇ ಆರೋಪಿತನು ನೀಡಿದ ಕೈಗಡ ಸಾಲದ ನೋಟರಿಯ ಪ್ರಮಾಣ ಪತ್ರ ಮತ್ತು ನಾವು ಅದನ್ನು ಹಿಂತಿರುಗಿಸಿದ ಬಗ್ಗೆ 1 ನೇ ಆರೋಪಿತನು ನೀಡಿದ ಸ್ವೀಕೃತಿ ಪತ್ರಗಳ ನಕಲನ್ನು ನಾನು ನೀಡಿರುತ್ತೇನೆ ಎಂದರೆ ಸರಿ. ಸದರಿ ನಕಲು ಪ್ರತಿಗಳ ಚೆಕ್ ಲಿಸ್ಟ ಮೂಲಕ ಕಳುಹಿಸಿರುತ್ತೇನೆ. ಅದನ್ನು ನಾನು ನೋಡಿದರೆ ಗುರುತಿಸುತ್ತೇನೆ. ಸದರಿ ದಾಖಲೆಯನ್ನು ನಿಪಿ 2 ಎಂದು ಗುರುತಿಸಲಾಯಿತು. ಅದರ ಮೇಲೆ ಇರುವ ಸಾಕ್ಷಿಯ ಸಹಿಯನ್ನು ನಿಪಿ 2(ಎ)ಎಂದು ಗುರುತಿಸಲಾಯಿತು. ಸದರಿ ದಾಖಲೆಗಳನ್ನು ನಾನು ನೋಡಿದರೆ ಗುರುತಿಸುತ್ತೇನೆ. ಸದರಿ ದಾಖಲೆಗಳು ನೆರಳಚ್ಚು ಪ್ರತಿಗಳು ಆಗಿರುತ್ತವೆ ಅವುಗಳನ್ನು ತನಿಖಾಧಿಕಾರಿಗಳು ದೃಡೀಕರಿಸಿರುತ್ತಾರೆ.

ಈ ಹಂತದಲ್ಲಿ ಮೂಲ ದಾಖಲೆಗಳನ್ನು ಹಾಜರುಪಡಿಸಸಲು ಸ.ಸ.ಅ ರವರು ಸಮಯವನ್ನು ಕೋರಿರುತ್ತಾರೆ. ಆದ್ದರಿಂದ ಸಮಯವನ್ನು ನೀಡಲಾಯಿತು.

( ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚುಗಾರನಿಂದ ಬೆರಳಚ್ಚು ಮಾಡಿಸಲಾಯಿತು)

**ಓ. ಹೇ. ಕೇ. ಸರಿ ಅದೆ.**

ಮುಖ್ಯ ನ್ಯಾಯಿಕ ದಂಡಾಧಿಕಾರಿಗಳು,
ಯಾದಗಿರಿ.